ನಾಟಕ ಇದೆ, ಬೇರೆ ಹೆಸರು ಬೇಕು ಎಂದರು. ತೇಜಸ್ವಿ ತೋಟಕ್ಕೆ ಹೋಗಿ ಈ ನಾಟಕಕ್ಕೆ 'ಯಮಳ ಪ್ರಶ್ನೆ' ಎಂದು ಹೆಸರಿಡೋಣ ಎಂದು ಪತ್ರ ಬರೆದರು. ಹೀಗೆ ತೇಜಸ್ವಿಯವರ 'ಯಮಳ ಪ್ರಶ್ನೆ' ನಾಟಕ ಮೈಸೂರಿನಲ್ಲಿ ಸೃಷ್ಟಿಯಾಯಿತು.

'ಯಮಳ ಪ್ರಶ್ನೆ' ನಾಟಕದ ಮೊದಲ ಪ್ರಯೋಗ ಆಗಿದ್ದು ಮೈಸೂರಿನಲ್ಲಿ. ಆ ದಿನಗಳಲ್ಲಿ ಅಂತರ ಕಾಲೇಜು ನಾಟಕ ಸ್ಪರ್ಧೆ ನಡೆಯುತ್ತಿದ್ದು, ಸ್ಪರ್ಧೆಯಲ್ಲಿ ಶೀಲ್ಡ್ ಗೆಲ್ಲುವುದು, ಅದರಲ್ಲೂ 'ಉಲ್ಲಾಳ್ ಶೀಲ್ಡ್' ಗೆಲ್ಲುವುದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಸಿಂಧುವಳ್ಳಿ ಅನಂತಮೂರ್ತಿಯವರು ಮತ್ತು ಬಿ.ಎನ್. ಶ್ರೀರಾಮ್ ಅಧ್ಯಾಪಕರಾಗಿದ್ದ ಆ ಅವಧಿಯಲ್ಲಿ ಈ ಸ್ಪರ್ಧೆಗೆ ಸಿಂಧುವಳ್ಳಿಯವರು ಒಂದು ಸಂಗೀತ ಪ್ರಧಾನ ನಾಟಕ ನಿರ್ದೇಶಿಸಿದರು. ಅವರು ಶ್ರೀರಾಮ್‌ಗೆ ನೀವು ನಮ್ಮ ಕಾಲೇಜ್ ವಿದ್ಯಾರ್ಥಿಗಳಿಂದ ಸ್ಪರ್ಧೆಗೆ ತೇಜಸ್ವಿಯವರ 'ಯಮಳ ಪ್ರಶ್ನೆ' ನಾಟಕ ಆಡಿಸಿ ಎಂದರು. ಶ್ರೀರಾಮ್ ಮೊದಲು ಒಪ್ಪಲಿಲ್ಲ. ಆದರೆ, ಸಿಂಧುವಳ್ಳಿಯವರ ಒತ್ತಾಯದ ಮೇರೆಗೆ ಶ್ರೀರಾಮ್ ನಿರ್ದೇಶನ ಮಾಡಿ ವಿದ್ಯಾರ್ಥಿಗಳಿಂದ 'ಯಮಳ ಪ್ರಶ್ನೆ' ನಾಟಕ ಆಡಿಸಿದರು. ಅಂದಿನ ಈ ಪ್ರತಿಷ್ಠಿತ ನಾಟಕ ಸ್ಪರ್ಧೆಯಲ್ಲಿ ಸಿಂಧುವಳ್ಳಿಯವರ ಸಂಗೀತ ನಾಟಕಕ್ಕೆ ಪ್ರಥಮ ಬಹುಮಾನ, 'ಯಮಳ ಪ್ರಶ್ನೆ' ನಾಟಕಕ್ಕೆ ತೃತೀಯ ಬಹುಮಾನ ದೊರಕಿತು. ಈ ಸಂಗತಿ ಮೈಸೂರಿನ ಬನುಮಯ್ಯ ಕಾಲೇಜು ಹಾಗೂ ಸುರುಚಿ ರಂಗಮನೆಗೆ ಹೆಮ್ಮೆಯ ಗರಿ ಆಯಿತು. ಮುಂದೆ ಸಿಂಧುವಳ್ಳಿಯವರು ಮತ್ತು ಹಾ.ಮಾ. ನಾಯಕರ ಸಂಪಾದಕತ್ವದಲ್ಲಿ ಕೆಲವು ಅಸಂಗತ ನಾಟಕಗಳ ಸಂಗ್ರಹ ಪ್ರಕಟವಾಗಿ, ಅದರಲ್ಲಿ 'ಯಮಳ ಪ್ರಶ್ನೆ'ಯೂ ಸೇರಿದೆ.



ಪೋಸ್ಟ್ ಕಾರ್ಡಿನಲ್ಲಿ ತೇಜಸ್ವಿ ರಚಿಸಿದ ಕಾಮಳ್ಳಿ ಹಕ್ಕಿಯ ಚಿತ್ರ.

ಇದಕ್ಕೆ ಪೂರಕವಾಗಿ ಮತ್ತೊಂದು ವಿಷಯ. ಒಮ್ಮೆ ನಾವೆಲ್ಲ ಸೇರಿದಾಗ ಬೆಂಗಳೂರಿನ ಮೌಂಟ್‌ಕಾರ್ಮೆಲ್ ಕಾಲೇಜ್ ಹಾಸ್ಟೆಲ್‌ನಲ್ಲಿ ಇದ್ದ ಕಟ್ಟುನಿಟ್ಟುಗಳ ಬಗ್ಗೆ ನಾನು ಹೇಳಿದೆ. ತೇಜಸ್ವಿಯವರು ಶಿವಮೊಗ್ಗ ಕಾಲೇಜಿನ ಹುಡುಗರಲ್ಲಿ ಎರಡು ಗುಂಪುಗಳಾಗಿ, ಭದ್ರಾವತಿ ಗುಂಪಿನ ಹುಡುಗರು ತಮ್ಮ ಸಹಪಾಠಿ ಹುಡುಗಿಯೊಬ್ಬಳನ್ನು ಮಾತಾಡಿಸಿದರೆಂದು ಶಿವಮೊಗ್ಗದ ಹುಡುಗರು ಅವರೊಂದಿಗೆ ನಡೆಸಿದ ಲಟಾಪಟಿ ಹೆಲೆನ್ ಆಫ್ ಟ್ರಾಯ್‌ಗಾಗಿ ನಡೆದ ಯುದ್ಧದಂತಿತ್ತು ಎಂದು ತಮಾಷೆ ಮಾಡಿ, ನೀವು ನಿಮ್ಮ ಹಾಸ್ಟೆಲ್ ಅನುಭವಗಳನ್ನೆಲ್ಲಾ ಬರೆದಿಡಿ, ನಾನು ನಮ್ಮೆಲ್ಲರ ಅನುಭವಗಳನ್ನು ಆಧರಿಸಿ 'ಹುಡುಗರು ಮತ್ತು ಹುಡುಗಿಯರು' ಅಂತ ಕಾದಂಬರಿ ಬರೆಯುತ್ತೇನೆ ಎಂದರು. ನಾನು ನನ್ನ ಹಾಸ್ಟೆಲ್ ಅನುಭವಗಳನ್ನೆಲ್ಲಾ ಗುರುತು ಹಾಕಿಟ್ಟು, ಸುಮಾರು ದಿನಗಳ ನಂತರ ತೇಜಸ್ವಿಯವರನ್ನ ಈ ಬಗ್ಗೆ ಕೇಳಿದಾಗ ಅವರು, 'ಅಯ್ಯೊ! ನೀವೇ ಬರೆದುಬಿಡ್ರಿ!' ಎಂದರು. ಆ ಕಾದಂಬರಿ ಬರಲೇ ಇಲ್ಲ!

ಈ ಗೆಳೆಯರಿಬ್ಬರ ಮನದಲ್ಲಿ ಮೂಡಿದ್ದ ಆಸೆಯಂತೆ 1964ರಲ್ಲಿ 'ಲಹರಿ ಪ್ರಕಾಶನ' ಎಂದು